2004ರವರೆಗೂ ಅಂದರೆ ನಿನ್ನೆಯವರೆಗೂ ಸಹ ನ್ಯಾಯಾಂಗ ಬಂಧನದಲ್ಲಿಡಲು ಆದೇಶವಾಗಿತ್ತು ನಿನ್ನೆ ಏನಾಯಿತು ಎಂದು ಇದುವರೆಗೂ ನಮಗೆ ವರದಿ ಬಂದಿಲ್ಲ ಹೀಗೆ ಒಟ್ಟಾರೆಯಾಗಿ ಐದು ಕೇಸ್‌ಗಳು ಇಲ್ಲಿ ದಾಖಲಾಗಿವೆ ಸುಳ್ಯ ಕ್ಷೇತ್ರದಲ್ಲಿ ಬಹಳಷ್ಟು ಖೋಟಾ ನೋಟು ಪ್ರಕರಣಗಳು ಬೆಳಕಿಗೆ ಬರುತ್ತಿರುವುದರಿಂದ ಮಾನ್ಯ ಸದಸ್ಯರು ಇದನ್ನು ಪ್ರಸ್ತಾಪಿಸಿದ್ದಾರೆ ಸಿ ಓ ಡಿ ಯಲ್ಲಿ ಕೌಂಟರ್‌ಫೀಟ್ ಕರೆನ್ಸಿ ಮತ್ತು ಆರ್ ಎಂ squad ಎಂಬುದೊಂದು ಇರುತ್ತದೆ ಅವರೂ ಕೂಡ ಇದನ್ನು parallel ಆಗಿ ತನಿಖೆ ಮಾಡುವಂತಹ ಅವಕಾಶ ಇದೆ ನಮ್ಮ ಪೊಲೀಸರೇ ಈಗ ಈ ಐದೂ ಕೇಸುಗಳನ್ನು ಡೀಲ್ ಮಾಡುತ್ತಿದ್ದಾರೆ ಇದಕ್ಕೆ ಏನು ಬೇಕಾದರೂ ಮಾಡುವುದಕ್ಕೆ ಸರ್ಕಾರ ಸಿದ್ಧವಾಗಿದೆ ನೀವು ಬೇಕಾದರೆ ಇದನ್ನು ಸಿ ಓ ಡಿ ಗೆ ವಹಿಸಿ ಎಂದು ಹೇಳಿದರೂ ಕೂಡ ಸರ್ಕಾರ ಅದಕ್ಕೆ ಇಲ್ಲ ಎನ್ನುವುದಿಲ್ಲ ಇದನ್ನು ಸಿ ಓ ಡಿ ಗೆ ವಹಿಸಲು ಸರ್ಕಾರ ಸಿದ್ಧವಾಗಿದೆ ಎನ್ನುವ ಮಾತನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಇಚ್ಛೆ ಪಡುತ್ತೇನೆ

17 ವಿಷಯ ಹೊಸ ನಗರ ತಾಲ್ಲೂಕಿನ ಸರ್ಕಾರಿ ಕಾಲೇಜಿನಲ್ಲಿ ವಿಜ್ಞಾನ ವಿಭಾಗ ತೆರೆಯುವ ಬಗ್ಗೆ

ಶ್ರೀ ಹೆಚ್ ಹಾಲಪ್ಪ (ಹೊಸನಗರ) ಮಾನ್ಯ ಅಧ್ಯಕ್ಷರೆ, ಹೊಸ ನಗರ ತಾಲ್ಲೂಕಿನಲ್ಲಿ 5 ಕಾಲೇಜುಗಳಿವೆ ಅದರಲ್ಲಿ ಒಂದು ಕಾಲೇಜಿನಲ್ಲಿ ಮಾತ್ರ ಪಿ ಯು ಸಿ ಯಲ್ಲಿ ಸೈನ್ಸ್ ಸೆಕ್ಷನ್ ಇತ್ತು ಈಗ ಅದನ್ನೂ ಮುಚ್ಚಿದ್ದಾರೆ ಮುಚ್ಚುವುದಕ್ಕೆ ಲೆಕ್ಚರರ್ ಇಲ್ಲ ಎಂಬ ಕಾರಣ ಹೇಳುತ್ತಾರೆ ಆದರೆ ಈ ವರ್ಷ ಎಸ್ ಎಸ್ ಎಲ್ ಸಿ ಯಲ್ಲಿ 896 ಜನ ವಿದ್ಯಾರ್ಥಿಗಳು ಪಾಸಾಗಿದ್ದಾರೆ ಅದರಲ್ಲಿ 319 ಫಸ್ಟ್ ಕ್ಲಾಸ್‌ನಲ್ಲಿ ಪಾಸಾಗಿದ್ದಾರೆ ಅವರು ಸೈನ್ಸ್ ತೆಗೆದುಕೊಂಡು ಓದಬೇಕೆಂದರೆ, ದೂರದ ಸಾಗರಕ್ಕೆ ಹೋಗಬೇಕು, ಶಿವಮೊಗ್ಗಕ್ಕೆ ಹೋಗಬೇಕು ಇಲ್ಲವೇ ಉಡುಪಿಗೆ ಹೋಗಬೇಕಾಗಿದೆ ಖಂಡಿತ ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ ಇಲ್ಲಿ ಸೈನ್ಸ್ ಸೆಕ್ಷನ್ ಓಪನ್ ಮಾಡಿ ಎಂದು ನಾನು ಎಲ್ಲಾ ಕಡೆ ಓಡಾಡಿದಾಗ, ಅದಕ್ಕೆ ಲೆಕ್ಚರರ್ ಇಲ್ಲವೆಂದು ಹೇಳಿದರು ಲೆಕ್ಚರರ್ ಅನ್ನು ನೀವು ತುಂಬಿಕೊಳ್ಳಿ ಎಂದರೆ, ಸರ್ಕಾರದ ಜಾರಿಯಲ್ಲಿರುವ ಮಿತವ್ಯಯ ಆದೇಶದ ಅಡಚಣೆಯಿಂದಾಗಿ ಆ ಸೈನ್ಸ್ ಸೆಕ್ಷನ್ ಓಪನ್ ಮಾಡುವುದಕ್ಕಾಗುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ ಈ ಮಿತವ್ಯಯ ಎಂಬುದು ಶಾಲಾ ಕಾಲೇಜುಗಳಿಗೂ ಅನ್ವಯವಾಗುತ್ತದೆಯೇ? ಇದು ಎಜ್ಯುಕೇಷನ್ ಡಿಪಾರ್ಟ್‌ಮೆಂಟಿಗೂ ಕೂಡ ಅನ್ವಯವಾಗುತ್ತದೆಯೇ? ಅಲ್ಲಿ ಶೇಕಡ 85ರಷ್ಟು ಮಾರ್ಕ್ಸ್ ತೆಗೆದವರು ಸುಮಾರು 25 ಜನ ಇದ್ದಾರೆ ಆ 25 ಜನ ವಿದ್ಯಾರ್ಥಿಗಳು ಎಲ್ಲಿ ಓದುವುದಕ್ಕೆ ಹೋಗಬೇಕು? ಅವರು ಸೈನ್ಸ್ ತೆಗೆದುಕೊಳ್ಳಬೇಕು ಎಂದರೆ, ಅವರು ಎಲ್ಲಿ ಓದಬೇಕು ಎಂಬ ಬಗ್ಗೆ ದಯವಿಟ್ಟು

ಸರ್ಕಾರ ಉತ್ತರ ಹೇಳಬೇಕು ಮತ್ತು ಇದಕ್ಕೆ ಕ್ರಮ ತೆಗೆದುಕೊಳ್ಳಬೇಕು ಇವತ್ತಿನ ಐ ಟಿ ಯುಗದಲ್ಲಿ, ಎಲ್ಲಾ ಮಕ್ಕಳೂ ನಾನೇನೋ ಇಂಜಿನಿಯರ್ ಆಗಬೇಕು, ಡಾಕ್ಟರ್ ಆಗಬೇಕು ಎಂದು ಬಯಸುತ್ತಾರೆ ಇಂಜಿನಿಯರ್ ಮತ್ತು ಡಾಕ್ಟರ್ ಕಥೆ ಈಗ ಮುಗಿಯುತ್ತಿದೆ, ಬಡವರೆಲ್ಲಾ ಅದನ್ನು ಈಗ ಓದುವುದಕ್ಕಾಗುವುದಿಲ್ಲ ಆದರೂ ಬೇರೆ ಏನಾದರೂ ಐ ಟಿ ಕಂಪ್ಯೂಟರ್ ಗಿಂಪ್ಯೂಟರ್ ಓದೋಣ ಎಂದರೆ ಅದಕ್ಕೂ ಈಗ ಬಹಳ ತೊಂದರೆಯಾಗುತ್ತಿದೆ 319 ಜನ ಫರ್ಸ್ಟ್ ಕ್ಲಾಸ್‌ನಲ್ಲಿ ಪಾಸಾಗಿದ್ದಾರೆ ಇಡೀ ತಾಲ್ಲೂಕಿನಲ್ಲಿ ಪಿಯುಸಿ ಸೈನ್ಸ್ ಇಲ್ಲ ದಯವಿಟ್ಟು ಅಲ್ಲಿ ಒಂದು ಪಿಯುಸಿಯಲ್ಲಿ ಸೈನ್ಸ್ ಸೆಕ್ಷನ್ ಓಪನ್ ಮಾಡಿಕೊಡಬೇಕು ಪಕ್ಕದ ತಾಲ್ಲೂಕಿನಲ್ಲಿ ಸೇರಿಕೊಂಡರೂ ಕೂಡ ಅಲ್ಲಿ ಹಾಸ್ಟಲ್‌ಗೆ ಪ್ರವೇಶ ಕೊಡುವುದಿಲ್ಲ ಸಾಗರ್ ತಾಲ್ಲೂಕಿನವರಿಗೆ ಇಲ್ಲವೆಂದು ಹೇಳುತ್ತಾರೆ, ಹೊಸನಗರದವರಿಗೆ ಇಲ್ಲವೆಂದು ಹೇಳುತ್ತಾರೆ, ಶಿವಮೊಗ್ಗದವರಿಗೆ ಕೇಳಿದರೆ ಇಲ್ಲವೆಂದು ಹೇಳುತ್ತಾರೆ ತೀರ್ಥಹಳ್ಳಿಯಲ್ಲಿ ಕೇಳಿದರೆ ನಿಮ್ಮ ತಾಲ್ಲೂಕಿನವರಿಗೆ ಹಾಸ್ಟೆಲ್‌ನಲ್ಲಿ ಸೀಟ್ ಇಲ್ಲ, ನಿಮ್ಮ ತಾಲ್ಲೂಕಿನವರಿಗೆ ಎಲ್ಲಿಂದ ತರಲಿ ಎಂದು ಹೇಳುತ್ತಾರೆ ವಿದ್ಯಾರ್ಥಿಗಳಿಗೆ ಎಷ್ಟು ತೊಂದರೆಯಾಗಿದೆ ಎಂದು ಹೇಳುತ್ತಿದ್ದೇನೆ ಬೇರೆ ತಾಲ್ಲೂಕುಗಳಿಗೆ ಹೋಗಿ ಸೈನ್ಸ್ ವಿಷಯ ತೆಗೆದುಕೊಂಡು ಓದಲಿಕ್ಕೆ ಹೋದರೂ ಸಹ ಯಾವುದೇ ಫೆಸಿಲಿಟಿ ಅಲ್ಲಿ ಸಿಗುವುದಿಲ್ಲ ಅದ್ದರಿಂದ ಕೂಡಲೇ ಕ್ರಮ ತೆಗೆದುಕೊಳ್ಳಬೇಕು ಏನು ಕ್ರಮ ತೆಗೆದುಕೊಳ್ಳುತ್ತೀರಿ, ಏನು ಸಹಾಯ ಮಾಡುತ್ತೀರಿ? ಎಂದು ಹೇಳಬೇಕು

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಹೊಸನಗರ ತಾಲ್ಲೂಕಿನ ಒಂದು ಭಾಗವನ್ನು ನಾನೂ ಕೂಡ ಪ್ರತಿನಿಧಿಸುತ್ತಿದ್ದೇನೆ ಇಡೀ ತಾಲ್ಲೂಕಿನಲ್ಲಿ ಪಿಯುಸಿಗೆ ಸೈನ್ಸ್ ಸೆಕ್ಷನ್ ಇಲ್ಲ ಮಿತವ್ಯಯ ಎನ್ನುವ ನೆಪದಲ್ಲಿ ಬಡವರ ಮಕ್ಕಳು ಇವತ್ತು ಸೈನ್ಸ್ ಪಿಯುಸಿಯನ್ನೂ ಓದಲಿಕ್ಕೆ ದುರ್ಗತಿ ಯಾಗುವುದಾದರೆ ಇದಕ್ಕೆ ಅರ್ಥವಿಲ್ಲ ಅಲ್ಲಿರತಕ್ಕಂತಹ ಜೂನಿಯರ್ ಕಾಲೇಜುಗಳಿಗೆ ಪಿಯುಸಿಯಲ್ಲಿ ಸೈನ್ಸ್ ಸೆಕ್ಷನ್ ಓಪನ್ ಮಾಡುವ ಹಾಗೆ ದಯಮಾಡಿ ಆದೇಶ ಕೊಡಬೇಕು

ಶ್ರೀ ಹೆಚ್ ಹಾಲಪ್ಪ ಉಪನ್ಯಾಸರು ಇಲ್ಲವೆಂದು ಹಾಲಿ ನಡೆಯುತ್ತಿದ್ದ ಪಿಯುಸಿ ಕಾಲೇಜ್ ಮುಚ್ಚಿದ್ದೀರಿ

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) ಇದನ್ನು ಸಂಬಂಧಪಟ್ಟ ಅಧಿಕಾರಿಗಳನ್ನು ಮತ್ತು ಡೈರೆಕ್ಟರ್ ಅವರನ್ನು ಕರೆಸಿ ಆದೇಶ ಕೊಡಿಸುತ್ತೇನೆ.

18 ವಿಷಯ ಸಂಕಷ್ಟಕ್ಕೊಳಗಾದ ದಲಿತ ಕುಟುಂಬಕ್ಕೆ ಪರಿಹಾರ ಒದಗಿಸುವ ಕುರಿತು

ಶ್ರೀ ಎಂ ವೈ ಪಾಟೀಲ್ (ಅಫಜಲ್‌ಪುರ) ಮಾನ್ಯ ಅಧ್ಯಕ್ಷರೆ, ಕೆ ಗ್ರಾಮದಿಂದ ಚಿಕ್ಕಮಗಳೂರಿಗೆ ಕೆಲಸಕ್ಕಾಗಿ ನಮ್ಮ ಒಂದು ದಲಿತ ಕುಟುಂಬ ಹೋಗಿತ್ತು ಅವರ ಹೆಸರು ಶೋಭೆ ಮತ್ತು ಕಲಾವತಿ ಎನ್ನುವವರು ಸಿಡಿಲು ಬಡಿದು ಕಾಲು ಕಳೆದುಕೊಂಡಿದ್ದಾರೆ ಅವರಿಗೆ ಸರ್ಕಾರದಿಂದ ಯಾವುದೇ ಧನಸಹಾಯವಾಗಲಿ,